# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1032
ಸದಸ್ಯರ ಹೆಸರು : ಶ್ರೀ ಎಂ.ಪಿ. ಕುಶಾಲಪ್ಪ (ಸುಜಾ) (ಸ್ಥಳೀಯ-ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ : 20/08/2025
ಉತ್ತರಿಸುವ ಸಚಿವರು : ಕಂದಾಯ ಸಚಿವರು.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಂದಾಯ ಇಲಾಖೆ ವ್ಯಾಪ್ತಿಗೆ ಬರುವ ಸಾರ್ವಜನಿಕ ರಸ್ತೆ, (ಗ್ರಾಮ ನಕ್ಷೆಯಲ್ಲಿ) ಜನರು ಓಡಾಡುವ ರಸ್ತೆಯನ್ನು ಒತ್ತುವರಿ ಮಾಡಿಕೊಂಡಿರುವವರ ವಿರುದ್ಧ ಸರ್ಕಾರ ಕೈಗೊಳ್ಳುವ ಕ್ರಮವೇನು; (ಆದೇಶ ಪ್ರತಿಗಳನ್ನು ನೀಡುವುದು) | ಸರ್ಕಾರದ ಸುತ್ತೋಲೆ ಸಂಖ್ಯೆ: ಆರ್.ಡಿ. 23 ಎಲ್.ಜಿ.ಪಿ. 2022, ದಿನಾಂಕ: 22.10.2023ರ ಸುತ್ತೋಲೆಯಲ್ಲಿ ತಾಲ್ಲೂಕಿನ ತಹಶೀಲ್ದಾರ್‌ಗಳು ನಕಾಶೆ ಕಂಡ ಕಾಲುದಾರಿ, ಬಂಡಿದಾರಿ ಅಥವಾ ರಸ್ತೆಗಳಲ್ಲಿ ಅನ್ಯ ಕೃಷಿ ಬಳಕೆದಾರರು ತಿರುಗಾಡಲು ಅವಕಾಶ ನೀಡದೇ ಅಡ್ಡಿಪಡಿಸುವಂತಹ ಅಥವಾ ಬಳಸಲು ಮುಚ್ಚಿರುವಂತಹ ಸಂದರ್ಭದಲ್ಲಿ ಅವುಗಳನ್ನು ತೆರವುಗೊಳಿಸಿ ದಾರಿಗಳನ್ನು ಸುಗಮಗೊಳಿಸಲು ಕ್ರಮವಹಿಸುವಂತೆ ಸೂಚನೆಗಳನ್ನು ನೀಡಲಾಗಿದೆ. ಮುಂದುವರಿದು, ಸರ್ಕಾರಿ ಜಮೀನಿನ ಒತ್ತುವರಿದಾರರ ವಿರುದ್ಧ ತಹಶಿಲ್ದಾರ್ ರವರ ಹಂತದಲ್ಲಿ ಕರ್ನಾಟಕ ಭೂಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಲು ಕ್ರಮವಹಿಸಲಾಗಿರುತ್ತದೆ. ಒತ್ತುವರಿದಾರರ ವಿರುದ್ಧ ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 192 (ಎ) ರಡಿ ಸಂಬಂಧಪಟ್ಟ ಪೋಲೀಸ್ ಠಾಣೆಯಲ್ಲಿ ಕ್ರಿಮಿನಲ್ ಮೊಕ್ಕದಮೆ ದಾಖಲಿಸಲು ಸಹ ಕ್ರಮವಹಿಸಲಾಗಿರುತ್ತದೆ |
| ಆ) | ಚಿಕ್ಕಮಗಳೂರು ಜಿಲ್ಲೆಯ ಆಲ್ದೂರು ಹೋಬಳಿ, ಕೆಳಗೂರು ಗ್ರಾಮದ ಸರ್ವೆ ನಂ.113/3ರಲ್ಲಿ ಹಾದು ಹೋಗುವ ಸರ್ಕಾರಿ ರಸ್ತೆಯನ್ನು (ಗ್ರಾಮ ನಕ್ಷೆ ಹಾಗೂ ಸರ್ವೆ ನಕ್ಷೆಯಲ್ಲಿ ಇರುವ) ಒತ್ತುವರಿ ಮಾಡಿಕೊಂಡು ನೂರಾರು ವರ್ಷದಿಂದ ಇದ್ದ ರಸ್ತೆಯನ್ನು ಮುಚ್ಚಿ ಕಾಫಿ ಗಿಡ ಹಾಕಿ ಸಾರ್ವಜನಿಕರಿಗೆ ತೊಂದರೆ ನೀಡುತ್ತಿರುವವರ ವಿರುದ್ಧ ಜಿಲ್ಲಾಧಿಕಾರಿ, | ಚಿಕ್ಕಮಗಳೂರು ತಾಲ್ಲೂಕು ಆಲ್ದೂರು ಹೋಬಳಿ ಕೆಳಗೂರು ಗ್ರಾಮದ ಸ. ನಂ. 113/3 ರಲ್ಲಿ ಇರುವ ನಕಾಶೆ ದಾಖಲೆಗಳ ರಸ್ತೆಯನ್ನು ಮುಚ್ಚಿರುತ್ತಾರೆ ಇದನ್ನು ತೆರವುಗೊಳಿಸಿಕೊಡುವಂತೆ ಶ್ರೀ ದಯಾಕರ ಎಂ.ಆರ್. ಬಿನ್ ರಾಮೇಗೌಡ ಎಂಬುವವರು ದಿನಾಂಕ 05-07-2025 ರಂದು ಮನವಿ ಸಲ್ಲಿಸಿರುತ್ತಾರೆ.<br>ಚಿಕ್ಕಮಗಳೂರು ತಾಲ್ಲೂಕು ಆಲ್ದೂರು |

| | | |
|---|---|---|
| | ಉಪವಿಭಾಗಾಧಿಕಾರಿ ಹಾಗೂ ತಹಶೀಲ್ದಾರ್‌ರವರಿಗೆ ದೂರು ನೀಡಿದರೂ ಇಲ್ಲಿಯವರೆಗೆ ಕ್ರಮಕೈಗೊಳ್ಳದಿರಲು ಕಾರಣವೇನು; (ವಿವರ ನೀಡುವುದು) | ಹೋಬಳಿ ಕೆಳಗೂರು ಗ್ರಾಮದ ಸ.ನಂ. 113 ರಲ್ಲಿ ಒಟ್ಟು 5 ಹಿಸ್ಸಾಗಳಿದ್ದು ಈ ಪೈಕಿ 113/2 ರಲ್ಲಿ 0.03 ಗುಂಟೆ ಹಾಗೂ 113/3 ರಲ್ಲಿ 0.06 ಗುಂಟೆ ಬ ಖರಾಬು ದಾಖಲಾಗಿರುತ್ತದೆ ಈ ಹಿನ್ನೆಲೆಯಲ್ಲಿ ಸದರಿ ಜಾಗ ಅನಧಿಕೃತವಾಗಿ ಒತ್ತುವರಿ ಮಾಡಿ ಭೌತಿಕವಾಗಿ ಮುಚ್ಚಿರುವ ಕುರಿತು ಒತ್ತುವರಿ ಮಾಡಿರುವ ಜಮೀನನ್ನು ಸ್ವಯಂಪ್ರೇರಣೆಯಿಂದ ತೆರವು ಗೊಳಿಸುವ ಬಗ್ಗೆ ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ ಕಲಂ 104 ರನ್ವಯ ದಿನಾಂಕ:14-08-2025 ರಂದು ಸಂಬಂದಪಟ್ಟ ಒತ್ತುವರಿದಾರರಿಗೆ ಹೊರದೂಡುವ ನೊಟೀಸ್ ನೀಡಲಾಗಿದ್ದು ಈ ಬಗ್ಗೆ ನಿಯಮಾನುಸಾರ ಪರಿಶೀಲಿಸಿ ಕ್ರಮವಹಿಸಲಾಗುವುದು. |
| ಇ) | ಗ್ರಾಮ ನಕ್ಷೆಯಲ್ಲಿ ಇದ್ದ ರಸ್ತೆಯನ್ನು ತೆರವು ಮಾಡಿ ಸಾರ್ವಜನಿಕರಿಗೆ ಅನುಕೂಲ ಮಾಡಲು ಇರುವ ತೊಡಕುಗಳೇನು; (ವಿವರ ನೀಡುವುದು) | ಸರ್ಕಾರದ ಸುತ್ತೋಲೆ ಸಂಖ್ಯೆ: ಆರ್.ಡಿ. 23 ಎಲ್.ಜಿ.ಪಿ. 2022, ದಿನಾಂಕ: 22.10.2023ರ ಸುತ್ತೋಲೆಯಲ್ಲಿ ತಾಲ್ಲೂಕಿನ ತಹಶೀಲ್ದಾರ್‌ಗಳು ನಕಾಶೆ ಕಂಡ ಕಾಲುದಾರಿ, ಬಂಡಿದಾರಿ ಅಥವಾ ರಸ್ತೆಗಳಲ್ಲಿ ಅನ್ಯ ಕೃಷಿ ಬಳಕೆದಾರರು ತಿರುಗಾಡಲು ಅವಕಾಶ ನೀಡದೇ ಅಡ್ಡಿಪಡಿಸುವಂತಹ ಅಥವಾ ಬಳಸಲು ಮುಚ್ಚಿರುವಂತಹ ಸಂದರ್ಭದಲ್ಲಿ ಅವುಗಳನ್ನು ತೆರವುಗೊಳಿಸಿ ದಾರಿಗಳನ್ನು ಸುಗಮಗೊಳಿಸಲು ಕ್ರಮವಹಿಸುವಂತೆ ಸೂಚನೆಗಳನ್ನು ನೀಡಲಾಗಿದೆ. |
| ಈ) | ಗ್ರಾಮ ನಕ್ಷೆ, ಸರ್ವೆ ನಕ್ಷೆ, ರಸ್ತೆ ಖರಾಬು ಮತ್ತು ಸರ್ಕಾರಿ ಆದೇಶಗಳು ಸದರಿ ಜಮೀನಿನ ಮಾಲೀಕರಿಗೆ ಅನ್ವಯವಾಗುವುದಿಲ್ಲವೇ? | |

ಸಂಖ್ಯೆ: ಆರ್‌ಡಿ 134 ಎಲ್‌ಜಿಕ್ಯೂ 2025

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು